

بسم اللهِ الرّحمٰن الرّحيم

# ವಕ್ಫ್ ಜದೀದ್ 58ನೇ ವರ್ಷದ ಪ್ರಾರಂಭ – ಕೆಲವು ವಿಶ್ವಾಸ ವರ್ಧಕ ಘಟನೆಗಳ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **09-01-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ಪಠಿಸಿದರು:*

فَاتَّقُوا اللَّهَ مَا اسْتَطَعْتُمْ وَاسْمَعُوا وَأَطِيعُوا وَأَنفِقُوا خَيْرًا لِأَنْفُسِكُمْ
وَمَنْ يُوقَ شُحَّ نَفْسِهِ فَأُوْلَئِكَ هُمُ الْمُفْلِحُونَ
إِنْ تُقْرِضُوا اللَّهَ قَرْضًا حَسَنًا يُضَاعِفْهُ لَكُمْ وَيَغْفِرْ لَكُمْ وَاللَّهُ
شَكُورٌ حَلِيمٌ

*ಫತ್ತಖುಲ್ಲಾಹ ಮಸ್‌ತತಅ್‌ತುಮ್ ವಸ್‌ಮಊ ವ ಅತೀಊ ವ ಅನ್‌ಫಿಖೂ ಖೈರನ್ ಲಿ ಅನ್‌ಫುಸಿಕುಮ್ ವ ಮನ್ ಯೂಖ ಶುಹ್ಹ ನಫ್‌ಸಿಹಿ ಫ ಊಲಾಯಿಕ ಹುಮುಲ್ ಮುಫ್‌ಲಿಹೂನ್. ಇನ್ ತುಖ್‌ರಿಝುಲ್ಲಾಹ ಖರ್‌ಝುನ್ ಹಸನನ್ ಯುಝಾಇಫ್‌ಹೂ ಲಕುಮ್ ವ ಯಗ್‌ಫಿರ್ ಲಕುಮ್ ವಲ್ಲಾಹು ಶಕೂರುನ್ ಹಲೀಮ್.*

**"ಆದ್ದರಿಂದ ನೀವು ಅಲ್ಲಾಹನಿಗೆ ಅತಿಹೆಚ್ಚು ಭಯಪಡಿರಿ. ಗಮನಿಸಿ ಕೇಳಿರಿ; ಅನುಸರಿಸಿರಿ ಮತ್ತು (ಅವನ ಮಾರ್ಗದಲ್ಲಿ) ವೆಚ್ಚಮಾಡಿರಿ. ಅದು ನಿಮಗೆಯೇ ಗುಣಕರವಾಗಿದೆ. ತಮ್ಮ ಮನಸ್ಸಿನ ಲೋಭಿತ್ವದಿಂದ ಯಾರು ಪಾರಾಗುತ್ತಾರೋ ಅವರೇ ಜಯಶಾಲಿಗಳು. ನೀವು ಅಲ್ಲಾಹನಿಗೆ ಉತ್ತಮವಾದ ರೀತಿಯಲ್ಲಿ ಸಾಲ ನೀಡಿದರೆ, ಅವನು ಅದನ್ನು ನಿಮಗೆ ವೃದ್ಧಿಗೊಳಿಸಿ ಹಿಂತಿರುಗಿಸುವನು. ಅಲ್ಲಾಹನು (ತನ್ನ ದಾಸರ ಸತ್ಕರ್ಮಗಳನ್ನು) ಅತಿ ಹೆಚ್ಚು ಮೆಚ್ಚುವವನೂ ಸೈರಿಸುವವನೂ ಆಗಿದ್ದಾನೆ."**

(ಪವಿತ್ರ ಖುರ್‌ಆನ್ 64: 17, 18)

ಇಂದಿನ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಮಾತ್ರ ಅಲ್ಲಾಹನ ಸಂಪ್ರೀತಿ ಗಳಿಸಲು ಹಾಗೂ ಅಲ್ಲಾಹನಿಗೋಸ್ಕರ ಒಳ್ಳೆಯ ಉದ್ದೇಶಲಕ್ಷ್ಯಗಳನ್ನು ತಲಪಲು ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಿದೆ. ಖರ್ಚು ಮಾಡುವ ಇಚ್ಛೆಯನ್ನೂ ಹೊಂದಿದೆ. ಇಸ್ಲಾಮ್ ಧರ್ಮ ಪ್ರಚಾರ, ಮುಬಲ್ಲಿಗರಿಗೆ ತರಬೇತಿ ನೀಡಿ ಅವರನ್ನು ಕಾರ್ಯಕ್ಷೇತ್ರಕ್ಕೆ ಕಳುಹಿಸುವುದು, ಪುಸ್ತಕಗಳ ಪ್ರಕಟಣೆ, ಪವಿತ್ರ ಖುರ್‌ಆನಿನ ಭಾಷಾಂತರಗಳನ್ನು ಪ್ರಕಟಿಸುವುದು, ಮಸ್‌ಜಿದ್‌ಗಳ ನಿರ್ಮಾಣ, ಮಿಶನ್ ಹೌಸ್‌ಗಳ ನಿರ್ಮಾಣ, ಶಾಲೆಗಳನ್ನು ನಿರ್ಮಿಸಿ ಚಲಾಯಿಸುವುದು, ವಿವಿಧ ದೇಶಗಳಲ್ಲಿ ರೇಡಿಯೋ ಸ್ಟೇಶನ್‌ಗಳನ್ನು ಜಾರಿಗೊಳಿಸಿ ಧರ್ಮ ಪ್ರಚಾರ ನಡೆಸುವುದು, ಆಸ್ಪತ್ರೆಗಳ ಸ್ಥಾಪನೆ ಹಾಗೂ ಇನ್ನಿತರ ಸಾಮಾಜಿಕ ಸೇವೆಗಳು– ಈ ರೀತಿ ವಿವಿಧ ಕೆಲಸಗಳಿಂದ **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್**ಗೆ ಸಂಬಂಧಿಸಿದ ಕೆಲಸಗಳನ್ನು ಇಂದಿನ ಕಾಲದಲ್ಲಿ ಲೋಕದಲ್ಲಿ ನೈಜ ಇಸ್ಲಾಮೀ ತತ್ವಗಳ ಪ್ರಕಾರ ಮಾಡುವುದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ನಾವು ಈ ಕೆಲಸ ಮಾಡುತ್ತಿರುವುದು ಈ ಕಾಲಘಟ್ಟದ ಇಮಾಮರನ್ನು ನಂಬಿ ಈ ಕೆಲಸಗಳ ಆವಶ್ಯಕತೆಗಳನ್ನು ಮನವರಿಕೆ ಮಾಡಿಕೊಂಡಿದ್ದರಿಂದಾಗಿದೆ. ನಾವು ಎಂತಹ ಜನರೆಂದರೆ ನಾವು ನಮ್ಮ ಜಿಪುಣತನದಿಂದ ನಮ್ಮನ್ನು ರಕ್ಷಿಸಿಕೊಂಡು ನಮ್ಮನ್ನು **ಮುಫ್ಲಿಹೂನ್** (ಜಯಶಾಲಿಗಳು) ಆಗಲು ಪ್ರಯತ್ನಿಸುತ್ತಿದ್ದೇವೆ. ಈ ಶಬ್ದದ ಅರ್ಥ ವಿಶಾಲವಾಗಿದೆ. ವಿಜಯಕ್ಕಿಂತ ಮಿಗಿಲಾದ ಅರ್ಥ ಅದಕ್ಕಿದೆ. ಅಂತಹ ಜನರು ಸಮೃದ್ಧಿಯನ್ನು ಪಡೆಯುವರು, ಜಯಗಳಿಸುವವರಾಗುವರು, ತಮ್ಮ ಉತ್ತಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳುವರು. ಅವರು ಸುಖಮಯ ಜೀವಿತವನ್ನು ಗಳಿಸಲು ಆಶಿಸುವವರಾಗುವರು. ಆ ಸುಖಮಯ ಜೀವಿತ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕಾಗಿರುವುದು. ಅಂತಹವರ ಜೀವಿತ ಅಲ್ಲಾಹನ ಸಂರಕ್ಷಣೆಗೆ ಒಳಗಾಗುತ್ತದೆ. ಅವರ ಸಮೃದ್ಧಿ ಸ್ಥಿರವಾಗಿರುತ್ತದೆ. ಅವರು ಅಲ್ಲಾಹನ ಅನುಗ್ರಹದಿಂದ ಸಮಾಧಾನ ಚಿತ್ತರಾಗಿರುತ್ತಾರೆ. ಅವರ ಮೇಲೆ ಅಲ್ಲಾಹನ ಅನುಗ್ರಹ ಯಾವಾಗಲೂ ಸುರಿಯುತ್ತಾ ಇರುತ್ತದೆ. ಈ ಲೋಕದಲ್ಲೂ ಪರಲೋಕದಲ್ಲೂ.

ಅಲ್ಲಾಹನ ಕಡೆಯಿಂದ ಜಯವನ್ನು ಗಳಿಸುವವರ ಜಯವು ಸೀಮಿತವಾಗಿರುವುದಿಲ್ಲ. ಅವರ ಜಯ ಅತ್ಯಂತ ಹೆಚ್ಚು ವಿಶಾಲವಾಗಿರುತ್ತದೆ. ಇಂತಹ ಜಯಗಳಿಸುವ ಜನರು ಎಷ್ಟು ಭಾಗ್ಯಶಾಲಿಗಳಾಗಿದ್ದಾರೆ. ಅಲ್ಲಾಹನು ಎಂದೂ ತಾನು ಪಡೆದ ಸಾಲವನ್ನು ಮರುಪಾವತಿ ಮಾಡದೆ ಇಟ್ಟುಕೊಳ್ಳುವುದಿಲ್ಲ. ನಿಮ್ಮ ಸಾಂಪತ್ತಿಕ ತ್ಯಾಗಗಳನ್ನು ಅಲ್ಲಾಹನು ಎಷ್ಟು ಪ್ರೀತಿಯಿಂದ ಕಾಣುತ್ತಾನೆ ಮತ್ತು ಎಷ್ಟು ಮೆಚ್ಚುತ್ತಾನೆಂದರೆ ನೀವು ಅಲ್ಲಾಹನಿಗೆ ಉತ್ತಮವಾದ ಸಾಲ ನೀಡಿರುವಿರೋ ಎಂಬಂತೆ. ಅಲ್ಲಾಹನು ಸಾಲದ ಮರುಪಾವತಿ ಮಾಡುವಾಗ ವರ್ಧಿಸಿಕೊಡುತ್ತಾನೆ. ಅಷ್ಟು ಮಾತ್ರವಲ್ಲ ನಿಮ್ಮ ಈ ತ್ಯಾಗದ ಕಾರಣ ಅಲ್ಲಾಹನು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ಕ್ಷಮೆ ನೀಡುತ್ತಾನೆ ಮಾತ್ರವಲ್ಲ ನೀವು ಇನ್ನಷ್ಟು ಹೆಚ್ಚು ಸತ್ಕರ್ಮಗಳನ್ನು ಮಾಡಲು ನಿಮಗೆ ಭಾಗ್ಯವನ್ನು ಅವನು ನೀಡುತ್ತಾನೆ.

ಅಲ್ಲಾಹನು ನೀವು ಮಾಡುವ ಕೆಲಸಗಳನ್ನು ಹೇಗೆ ಮೆಚ್ಚುತ್ತಾನೆಂದು ನಿಮಗೆ ಅಂದಾಜು ಮಾಡಲು ಸಾಧ್ಯವೇ ಇಲ್ಲ. ಅಲ್ಲಾಹನಿಂದ ಈ ರೀತಿ ಅನುಗ್ರಹಗಳಿಸುವವರು ಎಷ್ಟು ಭಾಗ್ಯಶಾಲಿಗಳಾಗಿದ್ದಾರೆ. ಇಂದಿನ ಕಾಲದಲ್ಲಿ ಲೋಕದಲ್ಲಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ತಿಳುವಳಿಕೆ ಇರುವುದು ಅಹ್ಮದಿಯರಿಗೆ ಮಾತ್ರವಾಗಿದೆ. ಈ ಕಾರಣದಿಂದ ಅಹ್ಮದಿಯರೇ ಅಲ್ಲಾಹನ ಅನುಗ್ರಹವನ್ನು ಗಳಿಸುತ್ತಾ ಇದ್ದಾರೆ. ಅಹ್ಮದಿಯರು ಭಾವಪರವಶರಾಗಿ ತಮಗೆ ಅಲ್ಲಾಹನು ಹೇಗೆಲ್ಲಾ ಅನುಗ್ರಹ ನೀಡಿದನು, ಹೇಗೆ ನಮಗೆ ತ್ಯಾಗ ಮಾಡುವ ಭಾಗ್ಯ ಲಭಿಸಿತು, ನಮ್ಮ ಪ್ರತೀಕ್ಷೆಗೆ

ಮಿಗಿಲಾಗಿ ನಮಗೆ ಹೇಗೆ ಅನುಗ್ರಹ ದೊರಕಿತು, ಎಂಬುದನ್ನೆಲ್ಲಾ ವಿವರಿಸುತ್ತಾ ಇರುತ್ತಾರೆ. ಅಂತಹ ಕೆಲವು ಘಟನೆಗಳನ್ನು ಈಗ ನಾನು ವಿವರಿಸುವೆನು:

ಬೆನಿನ್ ದೇಶದ ನಮ್ಮ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಕೋತೋನೋ ನಗರದ ಒಬ್ಬ ವೃದ್ಧ ಅಹ್ಮದಿ ಸಲ್ಮಾನ್ ಸಾಹೇಬರು ಆರ್ಥಿಕವಾಗಿ ಬಲಹೀನರಾಗಿದ್ದರು. ಬೆನಿನ್ ಜಲ್ಸಸಾಲಾನಕ್ಕೆ ಬಂದು ಹೋಗಲು ಪ್ರಯಾಣದ ಖರ್ಚಿಗೆ ಹಣ ಅವರಲ್ಲಿರಲಿಲ್ಲ. ಆದರೂ ಅವರು ಕಷ್ಟಪಟ್ಟು ಜಲ್ಸಸಾಲಾನಕ್ಕೆ ಬಂದರು. ಮರಳಿ ಹೋಗಲು ಹಣವಿರದ ಕಾರಣ ವ್ಯವಸ್ಥೆ ಮಾಡಲಾಯಿತು. ಅವರು ಮನೆಗೆ ತಲಪಿದ ನಾಲ್ಕೈದು ದಿನಗಳ ನಂತರ ವಕ್ಫ್ ಜದೀದ್ ಚಂದ ವಸೂಲು ಮಾಡಲು ಹೋದಾಗ ಸಲ್ಮಾನ್ ಸಾಹೇಬರು ಬಹಳ ಸಂತೋಷದಿಂದ ಆರುಸಾವಿರ ಫ್ರಾಂಕ್‌ಸೈಫ ಚಂದವಾಗಿ ಕೊಟ್ಟರು. ಅವರೊಂದಿಗೆ ಚಂದ ವಸೂಲು ಮಾಡುವವರು ಹೇಳಿದರು: ನೀವು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಚಂದ ನೀಡಬೇಡಿರಿ. ನಿಮ್ಮ ಮಕ್ಕಳಿಗೋಸ್ಕರ ಸ್ವಲ್ಪ ಇಟ್ಟುಕೊಳ್ಳಿರಿ. ಏಕೆಂದರೆ ನಿಮ್ಮ ಸಾಮರ್ಥ್ಯಕ್ಕಿಂತ ಮಿಗಿಲಾಗಿ ನೀವು ಚಂದ ಕೊಡುತ್ತಿದ್ದೀರಿ. ಆಗ ಅವರು ಹೇಳಿದರು: ಅಲ್ಲಾಹನು ನನಗೆ ಹಣ ಕೊಟ್ಟಿರುವಾಗ ಅವನ ಮಾರ್ಗದಲ್ಲಿ ಹೇಗೆ ಕೊಡದಿರಲಿ. ಇದು ನನ್ನ ಹಣವಲ್ಲ. ಇದು ಅಲ್ಲಾಹನು ನನಗೆ ನೀಡಿದ ಅಮಾನತ್ ಆಗಿದೆ. ನನ್ನ ಬಳಿ ಜಲ್ಸಕ್ಕೆ ಹೋಗಲು ಸಹ ಹಣವಿರಲಿಲ್ಲ. ನಾನು ಕಷ್ಟಪಟ್ಟು ಹೋಗಲು ಹಣ ಜೋಡಿಸಿದೆ. ನಾನು ಮರಳಿ ಬಂದ ನಂತರ ಅಲ್ಲಾಹನು ನನಗೆ ಬಹಳ ಅನುಗ್ರಹ ನೀಡಿದನು ಎಂದು ಹೇಳಿದರು. ಎರಡು ದಿನಗಳ ನಂತರ ಅವರು ಪುನಃ ಎರಡು ಸಾವಿರ ಸೈಫ ಚಂದವಾಗಿ ಕೊಟ್ಟರು.

ಸಿಯೆರಾಲಿಯೋನಿನ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಕೇನ್‌ಮಾರ್ ರೀಜನಿನ ಶೇಖೂ ಸಾಹೇಬರ ಬಳಿಗೆ ವಕ್ಫ್ ಜದೀದ್ ಚಂದದ ವಾಗ್ದಾನ ಪಡೆಯಲು ಸೆಕ್ರಟರಿ ಹೋದಾಗ ಶೇಖೂ ಸಾಹೇಬರು ಮಗಳೊಂದಿಗೆ ವಾಗ್ದಾನ ಬರೆಸಲು ಹೇಳಿದರು. ಮಗಳು ಹತ್ತು ಸಾವಿರ ಲೇವನ್ ಚಂದ ಕೊಡುವೆನು ಎಂದಳು. ಆಗ ಆ ಹುಡುಗಿಯ ತಾಯಿ ಹೇಳಿದರು: ಇಷ್ಟು ಹಣ ನೀನು ಹೇಗೆ ಕೊಡುವೆ? ಎಂದು. ಕೆಲವು ದಿನಗಳ ನಂತರ ಶೇಖೂ ಸಾಹೇಬರ ಸಂಬಂಧಿಕರು ಬಂದರು. ಅವರು ಮರಳಿ ಹೋಗುವಾಗ ಶೇಖೂ ಸಾಹೇಬರ ಮಗಳಿಗೆ ಹದಿನೈದು ಸಾವಿರ ಲೇವನ್ ಉಡುಗೊರೆಯಾಗಿ ಕೊಟ್ಟರು. ಆಗ ಶೇಖೂ ಸಾಹೇಬರ ಮಗಳು ಕೂಡಲೆ ತಂದೆಗೆ ಚಂದವಾಗಿ ಹತ್ತು ಸಾವಿರ ಲೇವನ್ ನೀಡಿ ಹೇಳಿದಳು: ಇದು ನನ್ನ ಚಂದವಾಗಿದೆ. ನಾನೇ ಇದರ ವಾಗ್ದಾನ ಮಾಡಿದ್ದೆ.

ಈ ರೀತಿ ಬಹಳ ದೂರ ಪ್ರದೇಶಗಳಲ್ಲಿ ವಾಸಿಸುವ ಅಹ್ಮದಿಯರಿಗೂ ಅವರ ಮಕ್ಕಳಿಗೂ ಅಲ್ಲಾಹನು ಅತ್ಯುನ್ನತ ನಿಷ್ಠೆಯನ್ನು ದಯಪಾಲಿಸಿದ್ದಾನೆ. ಅವರು ಚಂದಗಳ ಮಹತ್ವವನ್ನು ಮನವರಿಕೆ ಮಾಡಿ ಕೊಳ್ಳುತ್ತಾರೆ. ಅವರ ಹೃದಯಗಳಲ್ಲಿ ಈ ರೀತಿ ಪ್ರೇರೇಪಣೆ ಉಂಟು ಮಾಡುವುದು ಯಾರು? ಖಂಡಿತವಾಗಿಯೂ ಅದು ಅಲ್ಲಾಹನ ಹೊರತು ಬೇರೆ ಯಾರೂ ಅಲ್ಲ. ಹಾಗಿದ್ದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನಿಂದ ಕಳುಹಿಸಲ್ಪಟ್ಟವರೆಂದು ಲೋಕದ ಅಂಧರಿಗೆ ಕಾಣಿಸುವುದಿಲ್ಲ. ನೀವು ನೆನಪಿಟ್ಟುಕೊಳ್ಳಿರಿ ಹೊಸದಾಗಿ ಜಮಾಅತಿಗೆ ಸೇರುವವರು ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಅವರಲ್ಲಿ ಸತ್ಕರ್ಮಗಳನ್ನು ಮಾಡುವ ಎಂತಹ ಉತ್ಸಾಹವಿದೆ ಎಂದರೆ ಅದರ ಕಡೆಗೆ ಹಳೆಯ ಅಹ್ಮದಿಯರು ಮತ್ತು ಹಳೆಯ ಅಹ್ಮದಿ ಕುಟುಂಬಗಳು ಬಹಳ ಗಮನ ಹರಿಸಬೇಕು. ಬಹಳ ಚಿಂತಿಸಿ ಗಮನ ಹರಿಸಬೇಕು.

ಕಾಂಗೋ ಕನ್‌ಶಾಸಾದಿಂದ ಅಲ್ಲಿನ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಇಲ್ಲಿ ಮುಸ್ತಫಾ ಸಾಹೇಬ್ ಎಂಬವರು ಈ ವರ್ಷ ರಮಝಾನ್‌ನಲ್ಲಿ ಬೈಅತ್ ಮಾಡಿದ್ದರು. ಕ್ರೈಸ್ತಧರ್ಮ ವಿಶ್ವಾಸಿಯಾದ ಅವರ ಸಹೋದರಿ ರೋಗಪೀಡಿತಳಾಗಿದ್ದರು. ಮುಸ್ತಫಾ ಸಾಹೇಬರು ತನ್ನ ಚಂದದ ಜೊತೆಗೆ ತನ್ನ ಸಹೋದರಿ ಪರವಾಗಿ ಪ್ರಾರ್ಥಿಸಲು ಹೇಳಿ ಒಂದು ದೊಡ್ಡ ಸಂಖ್ಯೆ ಹಣ ಆಕೆಯ ಪರವಾಗಿ ಸಹ ಚಂದ ನೀಡಿದರು. ಅನಂತರ ಅವರ ಸಹೋದರಿ ರೋಗ ಮುಕ್ತೆಯಾದಳು.

ಅಲ್ಲಾಹನ ಅನುಗ್ರಹದಿಂದ ಹೊಸದಾಗಿ ಅಹ್ಮದಿಯರಾಗುವ ಜನರಲ್ಲಿ ಚಂದ ನೀಡುವ ಬಗ್ಗೆ ಆಸಕ್ತಿ ವರ್ಧಿಸುತ್ತಾ ಇರುತ್ತದೆ. ಅವರು ಬಹಳ ನಿಷ್ಠೆಯಿಂದ ಚಂದ ಕೊಡುತ್ತಿದ್ದಾರೆ. ಇದೇ ರೀತಿ ಒಬ್ಬ ನಿಷ್ಠಾವಂತ ಅಹ್ಮದಿ ಇಫಾನ ಸಾಹೇಬರು ಪ್ರತಿ ತಿಂಗಳು ಒಂದು ಲಕ್ಷದ ಐವತ್ತು ಸಾವಿರ ಫ್ರಾಂಕ್, ಎಂದರೆ ಅಂದಾಜು ಇನ್ನೂರು ಪೌಂಡು ಚಂದ ನೀಡುತ್ತಾರೆ. ಇದು ಆ ಬಡದೇಶಗಳಲ್ಲಿ ಬಹಳ ದೊಡ್ಡ ಸಂಖ್ಯೆಯೇ ಆಗಿದೆ. ಅವರು ಎರಡು ಲಕ್ಷದ ಐವತ್ತು ಸಾವಿರ ಫ್ರಾಂಕ್ (ಮುನ್ನೂರ ಮೂವತ್ತು ಪೌಂಡು) ಝಕಾತ್ ನೀಡಿದ್ದಾರೆ. ಅವರ ವಿಶ್ವಾಸದಲ್ಲಿ ವರ್ಧನೆ ಉಂಟಾಗುತ್ತಿದೆ.

ಭಾರತದ ಕಾಶ್ಮೀರಿನಿಂದ ಅಲ್ಲಿನ ಇನ್‌ಸ್ಪೆಕ್ಟರ್ ಸಾಹೇಬ್ ಬರೆಯುತ್ತಾರೆ: "ಕಾಶ್ಮೀರದಲ್ಲಿ ಕಳೆದ ವರ್ಷ ನೆರೆ ಹಾವಳಿ ತಲೆದೋರಿದಾಗ ಶ್ರೀನಗರದ ಎಲ್ಲಾ ಅಹ್ಮದಿಯರ ಮನೆಗಳಿಗೆ ನೆರೆನೀರು ನುಗ್ಗಿತ್ತು. ಆದುದರಿಂದ ಅವರ ಮನೆಗಳಿಗೆ ಹೋದಾಗ, ನಾನು ಚಂದ ವಸೂಲಿಗಾಗಿ ಬಂದಿದ್ದೇನೆ ಎಂದು ಹೇಳಲು ಧೈರ್ಯ ಬರುತ್ತಿರಲಿಲ್ಲ. ಆದರೆ ಅವರು ನನ್ನನ್ನು ಕಂಡಕೂಡಲೆ ಚಂದದ ಬಗ್ಗೆ ವಿಚಾರಿಸಿದರು. ಅವರು ತಮ್ಮ ಬಾಕಿಯಾದ ಚಂದವನ್ನು ನೀಡಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಅವರು ಕಷ್ಟದಲ್ಲಿದ್ದರೂ ಅವರ ಮುಖಭಾವದಲ್ಲಿ ಅದರ ಲಕ್ಷಣಗಳಿರಲಿಲ್ಲ. ಈ ದೃಶ್ಯಗಳನ್ನು ಕಂಡು ಕಣ್ಣೀರು ತುಂಬಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿಷ್ಯರ ನೆನಪು ಮರುಕಳಿಸುತ್ತಿತ್ತು. ಅವರ ಬಳಿ ಆಹಾರದ ಕೊರತೆ ಇದ್ದರೂ ಅವರು ತ್ಯಾಗ ಮಾಡಲು ಮುಂದಾಗುತ್ತಿದ್ದರು. ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮರ ಪ್ರಿಯಕರ ಜಮಾಅತನ್ನು ನೋಡುವಾಗ ನಮ್ಮ ವಿಶ್ವಾಸ ವರ್ಧಿಸುತ್ತದೆ.''

ಬೆನಿನ್ ದೇಶದ ಮುಅಲ್ಲಿಂ ಬರೆಯುತ್ತಾರೆ: ಓರ್ವ ಹೊಸದಾಗಿ ಬೈಅತ್ ಮಾಡಿದ ಅಹ್ಮದಿ ತನ್ನ ಕುಟುಂಬದ ಜನರು ಅಹ್ಮದಿಯರಾಗಬೇಕು ಎಂಬ ಸಂಕಲ್ಪದಿಂದ ಚಂದ ಕೊಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಈಗ ಅವರ ಕುಟುಂಬದ ಎಲ್ಲ ಸದಸ್ಯರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ. ಇದು ಧರ್ಮದ ಮಾರ್ಗದಲ್ಲಿ ಆರ್ಥಿಕ ತ್ಯಾಗ ಮಾಡಿದ ಅನುಗ್ರಹದ ಫಲವಾಗಿದೆ.

ಭಾರತದಿಂದ ಖಮರುದ್ದೀನ್ ಸಾಹೇಬ್ ಎಂಬ ಇನ್ಸ್‌ಪೆಕ್ಟರ್ ಬರೆಯುತ್ತಾರೆ: ಕೇರಳದ ಒಬ್ಬ 26ವರ್ಷದ ಯುವಕನನ್ನು ನಾನು ಭೇಟಿಯಾದೆ. ಆ ಯುವಕ ಹೇಳಿದರು: ''ನಾನು ಇಂಟೀರಿಯರ್ ಡಿಸಾಯಿನಿಂಗ್ ಕಲಿತಿದ್ದೇನೆ. ಈಗ ನನ್ನ ತಂದೆಯವರೊಂದಿಗೆ ನನ್ನ ಉದ್ಯೋಗ ಪ್ರಾರಂಭಿಸಿದ್ದೇನೆ.'' ನಾನು ವಕ್ಫ್ ಜದೀದ್ ಚಂದದ ಮಹತ್ವವನ್ನು ವಿವರಿಸಿದಾಗ ಆತ ಎರಡು ಲಕ್ಷ ರೂಪಾಯಿಗಳ ವಾಗ್ದಾನ ನೀಡಿದರು. ''ನಾನು ಈ ಕೆಲಸ ಈಗ ತಾನೆ ಪ್ರಾರಂಭಿಸಿದ್ದೇನೆ. ನನ್ನ ವಾಗ್ದಾನ ಅಲ್ಲಾಹನು ಹೇಗೆ ಈಡೇರಿಸುವನು ಎಂದು ತಿಳಿಯದು'' ಎಂದು ಹೇಳಿದರು. ಪ್ರಾರ್ಥನೆ ಮಾಡಲು ಖಲೀಫರಿಗೆ ಬರೆಯಲು ಹೇಳಿ ನಾನು ಸಹ ಖಲೀಫರಿಗೆ ಪತ್ರ ಬರೆದೆ. ಇನ್ಸ್‌ಪೆಕ್ಟರ್ ಚಂದ ವಸೂಲಿಗೆ ಪುನಃ ಹೋದಾಗ ಆ ಯುವಕ ಹೇಳಿದರು: ಅಲ್ಲಾಹನ ಅನುಗ್ರಹದಿಂದ ಅನೇಕ ಬ್ಯಾಂಕ್‌ಗಳಿಂದ ನನಗೆ ಇಂಟೀರಿಯರ್ ಡಿಸಾಯಿನಿಂಗ್ ಕೆಲಸ ಲಭಿಸಿದೆ ಮತ್ತು ನನ್ನ ಆದಾಯದಲ್ಲಿ ಬಹಳ ಅನುಗ್ರಹ ಉಂಟಾಗಿದೆ.'' ಆ ಯುವಕ ಕೂಡಲೆ ತನ್ನ ವಗ್ದಾನ ಪ್ರಕಾರ ಎರಡು ಲಕ್ಷ ರೂಪಾಯಿ ಚಂದವನ್ನು ಪೂರ್ಣವಾಗಿ ಪಾವತಿಸಿದರು.

ಭಾರತದ ನಾಯಿಬ್ ನಾಝಿಮ್ ವಕ್ಫೇ ಜದೀದ್ ಬರೆಯುತ್ತಾರೆ: ನಾನು ಉತ್ತರ ಪ್ರದೇಶದಲ್ಲಿ ಜಮಾಅತ್‌ಗಳನ್ನು ಸಂದರ್ಶಿಸಲು ಹೋದಾಗ ಕಾನ್‌ಪುರದ ಸೆಕ್ರೆಟರಿ ಮಾಲ್ ಮುಹಮ್ಮದ್ ಫರೀದ್ ಅನ್ವರ್ ಸಾಹೇಬರನ್ನು ಭೇಟಿಯಾದೆ. ಅವರ ಎಂಟು ವರ್ಷ ಪ್ರಾಯದ ಮಗಳು ಆಗ ನನ್ನೊಂದಿಗೆ ಹೇಳಿದಳು: ನಾನು ವರ್ಷವಿಡೀ ವಕ್ಫ್ ಜದೀದ್ ಚಂದಕ್ಕೋಸ್ಕರ ಹಣವನ್ನು ಈ ಡಬ್ಬಿಯಲ್ಲಿ ಹಾಕಿದ್ದೇನೆ. ಇದರಿಂದ ಹಣವನ್ನು ತೆಗೆದುಕೊಂಡು ನನಗೆ ರಶೀದಿ ನೀಡಿರಿ. ಈ ಎಂಟು ವರ್ಷದ ಬಾಲಕಿ ಅಲ್ಲಾಹನ ಅನುಗ್ರಹದಿಂದ ವಕ್ಫ ನೌ ತಹ್‌ರೀಕ್‌ಗೆ ಸಹ ಸೇರಿದವಳಾಗಿದ್ದಾಳೆ.

ಇಂತಹ ಉತ್ಸಾಹ ಮಕ್ಕಳಲ್ಲಿ ಉಂಟಾಗುತ್ತಿದೆ. ಮಕ್ಕಳ ಹೃದಯಗಳಲ್ಲಿ ಪ್ರೇರೇಪಣೆ ನೀಡುವುದು ಅಲ್ಲಾಹನೇ ಆಗಿದ್ದಾನೆ. ತಂದೆ ತಾಯಿಗಳ ಕರ್ತವ್ಯವೇನೆಂದರೆ ಅವರು ಮನೆಯಲ್ಲಿ ದೀನೀ ಪರಿಸರವನ್ನು ಸೃಷ್ಟಿಸಬೇಕು. ಆರಾಧನೆ ಮತ್ತು ಇತರ ಸತ್ಕರ್ಮಗಳ ಜೊತೆಗೆ ಚಂದದ ಮಹತ್ವದ ಬಗ್ಗೆಯೂ ಆಗಾಗ ಅವರ ಹೃದಯಗಳಿಗೆ ಉಪದೇಶ ದೊರೆಯುವಂತೆ ಮಾಡಬೇಕು. ಕೆಲವು ಸಾರಿ ಹೀಗೆ ಸಹ ಆಗಿದೆ. ಮಕ್ಕಳು ಚಂದದ ಹಣ ತಂದಾಗ, 'ನಿಮ್ಮ ಪರವಾಗಿ ನಿಮ್ಮ ತಂದೆ ಚಂದ ನೀಡಿದ್ದಾರೆ.' ಎಂದು ಅವರೊಡನೆ ಹೇಳುವಾಗ ಆ ಮಕ್ಕಳು ಹೇಳುವರು: ನಮ್ಮ ತಂದೆಯವರು ಕೊಟ್ಟ ಚಂದದ ಪುಣ್ಯ ಅವರಿಗೆ ಲಭಿಸುವುದು. ನಾವು ನಮ್ಮ ಚಂದ ನಮಗೆ ದೊರೆತ ಪಾಕೆಟ್ ಮನಿಯಿಂದ ಉಳಿತಾಯ ಮಾಡಿ ಕೊಡುವೆವು ಎಂದು.

ಇಂಗ್ಲೆಂಡಿನ **ಲಜ್‌ನ**ಕ್ಕೆ ಸೇರಿದ ಒಬ್ಬ ಮಹಿಳೆ ಆರ್ಥಿಕವಾಗಿ ಬಲಹೀನೆಯಾಗಿದ್ದರು. ಅವರು ಬಹಳ ಕಡಿಮೆ ಸಂಖ್ಯೆಯಲ್ಲಿ ಚಂದದ ಹಣ ಬರೆಸಿದರು. ಅವರಿಗೆ ಹೊಲಿಗೆ ಕೆಲಸ ತಿಳಿದಿತ್ತು. ಅವರಿಗೆ ಅನಂತರ ಹೊಲಿಗೆ ಕೆಲಸ ತುಂಬಾ ಲಭಿಸಿತು. ಆಕೆ ಚಂದದ ಹಣ ಕೊಟ್ಟರಲ್ಲದೆ ಅವರ ಆದಾಯ ಬಹಳ ಹೆಚ್ಚಾದ ಕಾರಣ ನಂತರ ತನ್ನ ವಾಗ್ದಾನವನ್ನು ವರ್ಧಿಸಿದರು. ಇಲ್ಲಿ ಇನ್ನೊಂದು ವಿಷಯ ಹೇಳಲು ಬಯಸುತ್ತೇನೆ. ತಹ್‌ರೀಕ್ ಜದೀದ್ ಮತ್ತು ವಕ್‌ಫೇ ಜದೀದ್ ಚಂದ ನೀಡುವುದರಲ್ಲಿ ಇಲ್ಲಿನ ಯು.ಕೆ. **ಲಜ್‌ನ** ಬಹಳ ಪರಿಶ್ರಮ ಪಡುತ್ತಾರೆ. ಅವರು ತಮ್ಮ ವಾಗ್ದಾನಕ್ಕಿಂತ ಹೆಚ್ಚು ಚಂದ ಅಲ್ಲಾಹನ ಅನುಗ್ರಹದಿಂದ ನೀಡುತ್ತಾ ಇದ್ದಾರೆ.

ಆರ್ಥಿಕ ತ್ಯಾಗದ ಅನೇಕ ಸಂಭವಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ವಿವರಿಸಿದ್ದೇನೆ. ಅಲ್ಲಾಹನು ಯಾವ ರೀತಿ ವರ್ಧಿಸಿಕೊಡುತ್ತಾನೆಂದು ನಾವು ನೋಡುತ್ತಿದ್ದೇವೆ. ಅಲ್ಲಾಹನು ಸತ್ಯವಾದ ವಾಗ್ದಾನ ಮಾಡುವವನಾಗಿದ್ದಾನೆ. ಈ ಘಟನೆಗಳು ಅಲ್ಲಾಹನ ವಚನಗಳ ಸತ್ಯತೆಯನ್ನು ಪ್ರಕಟಿಸುತ್ತವೆ ಮಾತ್ರವಲ್ಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಯಾವ್ಯಾವ ದೇಶಗಳಲ್ಲಿದ್ದರೂ ಅಲ್ಲೆಲ್ಲಾ ಅಲ್ಲಾಹನು ನೆರವು ನೀಡುವ ದೃಶ್ಯಗಳು ಕಾಣಿಸುತ್ತವೆ. ವಕ್ಫೇ ಜದೀದಿನ ''ತಹ್‌ರೀಕೆ ಬೇರೂನ್'' ಎಂದರೆ ಪಾಕಿಸ್ತಾನದ ಹೊರಗಿನ ದೇಶಗಳಾದ ಆಫ್ರಿಕದ ದೇಶಗಳಿಗೂ ಭಾರತಕ್ಕೂ ಅವುಗಳ ಆವಶ್ಯಕತೆ ಈಡೇರಿಸಲು ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲಾ) ಪ್ರಾರಂಭಿಸಿದ ಒಂದು ಯೋಜನೆಯಾಗಿದೆ. ಈಗ ಅಲ್ಲಾಹನ ಅನುಗ್ರಹದಿಂದ ಆಫ್ರಿಕದ 18 ದೇಶಗಳಲ್ಲಿ 95 ಮಸ್‌ಜಿದ್‌ಗಳು ನಿರ್ಮಾಣದ ಹಂತದಲ್ಲಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಹೇಳಿದ್ದರು- ಇಸ್ಲಾಮ್ ಬಗ್ಗೆ ಪ್ರಚಾರ ಮಾಡಲು ಮಸ್‌ಜಿದ್‌ಗಳನ್ನು ನಿರ್ಮಿಸಿರಿ ಎಂದು. ಈ ವರ್ಷ 204 ಮಸ್‌ಜಿದ್‌ಗಳನ್ನು ನಿರ್ಮಿಸಲಾಗಿದೆ. 184 ಮಿಶನ್ ಹೌಸ್‌ಗಳನ್ನು ಸಹ ನಿರ್ಮಿಸಲಾಗಿದೆ.

ನಾನು ನನ್ನ ಖಿಲಾಫತ್ತಿನ ಪ್ರಥಮ ವರ್ಷವೇ ಹೇಳಿದ್ದೆ. ಅಸಂಖ್ಯಾತ ಬೈಅತ್‌ಗಳು ವ್ಯರ್ಥವಾಗುತ್ತಿವೆ. ಕನಿಷ್ಠ ಪಕ್ಷ ಶೇಕಡಾ ಎಪ್ಪತ್ತರಷ್ಟು ಜನರನ್ನು ಸಂಪರ್ಕಿಸಿ ಮರಳಿ ಜಮಾಅತಿಗೆ ತನ್ನಿರಿ ಎಂದು. ಅಲ್ಲಾಹನ ಅನುಗ್ರಹದಿಂದ ಈ ನಿಟ್ಟಿನಲ್ಲಿ ಜಮಾಅತ್‌ಗಳು ಪ್ರಯತ್ನ ಮಾಡಿದವು. ಆಫ್ರಿಕನ್ ದೇಶಗಳಲ್ಲಿ ಲಕ್ಷಾಂತರ ಜನರೊಂದಿಗೆ

ಸಂಬಂಧ ಸ್ಥಾಪಿಸಲಾಯಿತು. ಅವರು ಮರಳಿ ಬಂದರು. ಈಗ ಅವರ ತರಬೇತಿಗೋಸ್ಕರ ಕಾರ್ಯಕ್ಷಮತೆಯಿಂದ ವ್ಯವಸ್ಥೆ ಮಾಡುತ್ತಿದ್ದೇವೆ. ಇದನ್ನು ಬಲಪಡಿಸುವುದು ಆವಶ್ಯಕವಾಗಿದೆ. ಎಲ್ಲದಕ್ಕಿಂತಲೂ ಹೆಚ್ಚಿನ ಪ್ರಯತ್ನ ಘಾನದಲ್ಲಿ ನಡೆಯಿತು. ಅನಂತರ ನೈಜಿರಿಯಾದಲ್ಲಿ ಮತ್ತು ಇತರ ಆಫ್ರಿಕನ್ ದೇಶಗಳಲ್ಲಿ ಸಹ ನಡೆದಿದೆ. ಟ್ಯಾಂಝಾನಿಯಾದಲ್ಲಿ ಬಹಳ ಕಡಿಮೆ ಕೆಲಸ ನಡೆದಿದೆ. ಅಲ್ಲಿ ಬಹಳ ಹೆಚ್ಚು ಪ್ರಯತ್ನ ಮಾಡಬೇಕಾಗಿದೆ. ಬೋಸ್ನಿಯಾ ದೇಶದ ಸ್ಥಿತಿ ಕೆಟ್ಟು ಹೋದಾಗ ಜರ್ಮನಿಗೆ ಬಹಳ ಬೋಸ್ನಿಯಾ ಜನರು ಆಗಮಿಸಿದರು. ಒಂದು ಲಕ್ಷ ಬೋಸ್ನಿಯನ್ ಜನರು ಬೈಅತ್ ಮಾಡಿದ್ದರು. ನಂತರ ಅವರು ಸ್ವದೇಶಕ್ಕೆ ಮರಳಿದಾಗ ಅವರೊಂದಿಗೆ ಸಂಪರ್ಕ ಕಡಿದು ಹೋಯಿತು. ಇದೇ ರೀತಿ ಭಾರತದ ಪಶ್ಚಿಮ ಬಂಗಾಳದಲ್ಲಿ ಸಹ ಜನರು ಬೈಅತ್ ಮಾಡಿದ್ದರು ಎಂದು ಹೇಳುತ್ತಾರೆ. ಅಲ್ಲಿ ಸಹ ಅವರನ್ನು ಹುಡುಕಬೇಕಾದ ಆವಶ್ಯಕತೆಯಿದೆ. ಒಳ್ಳೆಯ ಪ್ರಕೃತಿಯ ಜನರು ಮತ್ತು ಅಲ್ಲಾಹನು ಯಾರನ್ನು ರಕ್ಷಿಸಲು ಇಚ್ಛಿಸುತ್ತಾನೋ ಅಂತಹ ಜನರು **ಇನ್‌ಶಾಅಲ್ಲಾಹ್** ಮರಳಿ ಬರುವರು. ಬಲಹೀನರು ದೂರ ಸರಿದರೆ ನಮಗೆ ಅವರ ಬಗ್ಗೆ ಸಹಾನುಭೂತಿ ಇದೆ. ಅವರು ಅಲ್ಲಾಹನಿಂದ ಬಹುಮಾನ ಪಡೆದರೂ ಅದನ್ನು ಕಳೆದುಕೊಂಡರು. ಆದರೆ ನಮ್ಮ ಜನಸಂಖ್ಯೆ ಕಡಿಮೆಯಾಗಿದೆ ಎಂಬ ಯಾವ ಚಿಂತೆಯೂ ನಮಗಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಜನಸಂಖ್ಯೆಯ ವೃದ್ಧಿಗಿಂತ ನಿಷ್ಠೆ ಮತ್ತು ವಿಶ್ವಾಸದಲ್ಲಿ ವರ್ಧನೆ ಹೊಂದಿದ ಜನರ ವೃದ್ಧಿಯ ಬಗ್ಗೆ ಒತ್ತಿ ಹೇಳಿದ್ದಾರೆ. ಜಮಾಅತ್‌ಗಳಿಗೆ ಈ ಕೆಲಸಗಳನ್ನು ಈಡೇರಿಸುವ ಭಾಗ್ಯ ಲಭಿಸಲಿ.

ನಾನು ಈಗ ವಕ್ಫ್ ಜದೀದ್‌ನ ಹೊಸ ವರ್ಷದ ಆರಂಭದ ಘೋಷಣೆ ಮಾಡುತ್ತೇನೆ. ವಕ್ಫ್ ಜದೀದ್‌ನ 57ನೇ ವರ್ಷ ಅಲ್ಲಾಹನ ಅನುಗ್ರಹಗಳನ್ನು ಹೀರುತ್ತಾ ಡಿಸೆಂಬರ್ 31ರಂದು ಮುಗಿತಾಯವಾಯಿತು. 58ನೇ ವರ್ಷಾರಂಭ ಜನವರಿ ಒಂದರಿಂದ ಪ್ರಾರಂಭವಾಗಿದೆ. ಈ ವರ್ಷ ಅಲ್ಲಾಹನ ಅನುಗ್ರಹದಿಂದ ಅರುವತ್ತೆರಡು ಲಕ್ಷ ಒಂಬತ್ತು ಸಾವಿರ ಪೌಂಡ್ ಚಂದ ಅರ್ಪಿಸುವ ಭಾಗ್ಯ ಜಮಾಅತಿಗೆ ಲಭಿಸಿದೆ. ಇದು ಹಿಂದಿನ ವರ್ಷಕ್ಕಿಂತ ಏಳು ಲಕ್ಷದ ಮೂವತ್ತೊಂದು ಸಾವಿರ ಪೌಂಡುಗಳಷ್ಟು ಹೆಚ್ಚಿಗೆ ಆಗಿದೆ- **ಅಲ್‌ಹಮ್‌ದುಲಿಲ್ಲಾಹ್**. ಪಾಕಿಸ್ಥಾನ ಪ್ರಥಮ ಸ್ಥಾನದಲ್ಲಿದೆ. ಅನಂತರ ಇಂಗ್ಲೆಂಡ್, ಅಮೇರಿಕ, ಜರ್ಮನಿ, ಕೆನಡ, ಭಾರತ, ಆಸ್ಟ್ರೇಲಿಯಾ, ಇಂಡೋನೇಶಿಯಾ. ಅನಂತರ ದುಬಾಯಿ, ಬೆಲ್‌ಜಿಯಮ್ ಮತ್ತು ಇನ್ನೊಂದು ಅರಬ್ ದೇಶ. ಒಂದರನಂತರ ಇನ್ನೊಂದರಂತೆ ಸ್ಥಾನ ಪಡೆದಿದೆ. ಕರೆನ್ಸಿ ಲೆಕ್ಕದಲ್ಲಿ ಆಸ್ಟ್ರೇಲಿಯ ಶೇಕಡಾ 32ರಷ್ಟು, ಕೆನಡ ಶೇಕಡಾ 21ರಷ್ಟು ಮತ್ತು ಭಾರತ ಶೇಕಡಾ 17ರಷ್ಟು ವರ್ಧನೆ ಮಾಡಿದೆ. ಪ್ರತಿ ವ್ಯಕ್ತಿ ಲೆಕ್ಕ ಪ್ರಕಾರ ಅಮೇರಿಕ ಪ್ರಥಮ ಸ್ಥಾನದಲ್ಲಿದೆ. ಪ್ರತಿ ವ್ಯಕ್ತಿಗೆ 70ಪೌಂಡ್, ಸ್ವಿಝರ್‌ಲೇಂಡ್ 59ಪೌಂಡ್, ಯುಕೆ 51ಪೌಂಡ್, ಆಸ್ಟ್ರೇಲಿಯಾ 56ಪೌಂಡ್ ಅನಂತರ ಬೆಲ್‌ಜಿಯಂ, ಫ್ರಾನ್ಸ್, ಕೆನಡ ಹಾಗೂ ಜರ್ಮನಿ ಕೊನೆಯ ಸ್ಥಾನದಲ್ಲಿದೆ.

ವಕ್ಫೇ ಜದೀದ್‌ಗೆ ಸೇರಿದವರ ಸಂಖ್ಯೆ ಹನ್ನೊಂದು ಲಕ್ಷ ಇಪ್ಪತ್ತೊಂಬತ್ತು ಸಾವಿರಕ್ಕಿಂತ ಹೆಚ್ಚಾಗಿದೆ. ಸದಸ್ಯರ ಸಂಖ್ಯೆ ವರ್ಧಿಸಿದ ದೃಷ್ಟಿಯಲ್ಲಿ ಮಾಲಿ, ಬೆನಿನ್, ನೈಜೀರಿಯಾ, ಬುರ್ಕಿನೋಫಾಸ್, ಗ್ಯಾಂಬಿಯಾ, ಮತ್ತು ಕ್ಯಾಮರೂನಿನ ಜಮಾಅತ್‌ಗಳು ಗಮನಾರ್ಹವಾಗಿವೆ. ಪೂರ್ಣ ವಸೂಲಿ ದೃಷ್ಟಿಯಲ್ಲಿ ಆಫ್ರಿಕನ್ ದೇಶಗಳಲ್ಲಿ ಪ್ರಥಮ ಸ್ಥಾನ ಘಾನಕ್ಕಿದೆ. ಅನಂತರ ನೈಜಿರಿಯಾ ಆ ಮೇಲೆ ಮೌರಿಶಸ್.

ಚಂದ ವಸೂಲಿಯ ದೃಷ್ಟಿಯಲ್ಲಿ ಭಾರತದ ಪ್ರಾಂತ್ಯಗಳು ಅನುಕ್ರಮವಾಗಿ ಹೀಗಿವೆ: ಕೇರಳ, ಜಮ್ಮುಕಾಶ್ಮೀರ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮಬಂಗಾಳ, ಒಡೀಶ, ಕರ್ನಾಟಕ, ಖಾದಿಯಾನ್ ಪಂಜಾಬ್, ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ್, ಲಕ್ಷದ್ವೀಪ, ರಾಜಸ್ಥಾನ ಇವುಗಳು. ಭಾರತದ ಜಮಾಅತ್‌ಗಳಲ್ಲಿ ಚಂದ ವಸೂಲಿ ಅನುಕ್ರಮವಾಗಿ ಹೀಗಿದೆ: ಕರುಳಾಯಿ, ಕೋಝಿಕ್ಕೋಡ್, ಹೈದರಾಬಾದ್, ಕೊಲ್ಕತ್ತ, ಖಾದಿಯಾನ್, ಕಣ್ಣೂರ್ ಟೌನ್, ಸೋರೋ, ಪಯಂಗಾಡಿ, ಚೆನ್ನೈ, ಬೆಂಗಳೂರು. ಕೊನೆಯಲ್ಲಿ ಮೂರು ಜಮಾಅತ್‌ಗಳಿವೆ ಕರುನಾಗಪಳ್ಳಿ, ಪತ್ತಪಿರಿಯಮ್ ಮತ್ತು ಕರಾನ್.

ಅಲ್ಲಾಹನು ಆರ್ಥಿಕ ತ್ಯಾಗ ಮಾಡುವವರ ಸಂಪತ್ತಿನಲ್ಲಿ ಮತ್ತು ಸಂತಾನದಲ್ಲಿ ವರ್ಧನೆಯನ್ನು ಉಂಟುಮಾಡಲಿ.

ಕೊನೆಯದಾಗಿ ಪ್ರಾರ್ಥನೆ ಬಗ್ಗೆ ಹೇಳಲು ಬಯಸುತ್ತೇನೆ. ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಶತ್ರುಗಳು ಕೆಲವು ದಿನಗಳಿಂದ ರಬ್ವದಲ್ಲಿ ಪರಿಸ್ಥಿತಿಯನ್ನು ಹಾಳುಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಾಹನು ಪ್ರತಿಯೊಂದು ಕೆಡುಕುಗಳಿಂದ ಎಲ್ಲ ಅಹ್ಮದಿಯರನ್ನೂ ರಕ್ಷಿಸಲಿ. ಶತ್ರುಗಳ ಕೆಡುಕು ಅವರಿಗೆಯೇ ಮರಳುವಂತಾಗಲಿ. ರಬ್ವದಲ್ಲಿ ಶಾಂತಿ ನೆಲೆಸುವಂತಾಗಲಿ. ಸರಕಾರಕ್ಕೆ ಮತ್ತು ಆಡಳಿತೆ ವ್ಯವಸ್ಥೆಗೆ ಈ ವಿಷಯವನ್ನು ಸರಿಯಾಗಿ ನಿಭಾಯಿಸಲು ಅಲ್ಲಾಹನು ಬುದ್ಧಿ ನೀಡಲಿ.

ಅದೇ ರೀತಿ ಮುಸ್ಲಿಮ್ ಲೋಕಕ್ಕೂ ಯುರೋಪಿನಲ್ಲಿ ವಾಸಿಸುವ ಮುಸ್ಲಿಮರಿಗೋಸ್ಕರವೂ ಪ್ರಾರ್ಥನೆ ಮಾಡಿರಿ. ಫ್ರಾನ್ಸ್‌ನಲ್ಲಿ ಒಂದು ದೌರ್ಜನ್ಯಕರ ಘಟನೆ ನಡೆದಿದೆ. ಅದು ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನಲ್ಲಿ ನಡೆದಿದೆ. ಅವರ ಈ ವರ್ತನೆಗೆ ಇಸ್ಲಾಮ್ ಧರ್ಮದ ಉಪದೇಶಗಳೊಂದಿಗೆ ದೂರದ ಸಂಬಂಧ ಸಹ ಇಲ್ಲ. ಕಾನೂನನ್ನು ಕೈಗೆತ್ತಿಕೊಂಡು ಈ ರೀತಿ ಜನರನ್ನು ಕೊಲ್ಲುವುದು ಮತ್ತು ನರ ಹತ್ಯೆ ಮಾಡುವುದು- ಇದರ ಬಗ್ಗೆ ನಾವು ಯಾವಾಗಲೂ ಹೇಳುತ್ತಿದ್ದೇವೆ- ಇಸ್ಲಾಮ್ ಧರ್ಮತತ್ವಗಳೊಂದಿಗೆ ಇದಕ್ಕೆ ಯಾವ ಸಂಬಂಧವೂ ಇಲ್ಲ ಎಂದು. ನಾವು ಅದನ್ನು ಸಾಬೀತುಪಡಿಸುತ್ತೇವೆ. ಆದರೆ ಮುಸ್ಲಿಮರೆಂದು ಹೇಳಿಕೊಳ್ಳುವ ಸಂಘಟನೆಗಳು ತಮ್ಮ ಕೆಲಸಗಳಿಂದ ಮತ್ತು ದೌರ್ಜನ್ಯಗಳಿಂದ ಹಿಂದೆ ಸರಿಯುವುದಿಲ್ಲ ಇದರ

ಪರಿಣಾಮವಾಗಿ ಇಲ್ಲಿರುವ ಮುಸ್ಲಿಮರು ಇಲ್ಲಿನ ಸ್ಥಳೀಯ ಜನರಿಂದ ತಪ್ಪು ಪ್ರತಿಕ್ರಿಯೆಗಳಿಗೆ ಪಾತ್ರರಾಗಬಹುದು. ಅಷ್ಟು ಮಾತ್ರವಲ್ಲ, ಯಾವ ಪತ್ರಿಕೆಯ ವಿರುದ್ಧ ಆಕ್ರಮಣ ಮಾಡಲಾಗಿದೆಯೋ ಆ ಪತ್ರಿಕೆ, ಇಲ್ಲಿನ ಜನರು, ಇಲ್ಲಿನ ಸಂಪರ್ಕ ಮಾಧ್ಯಮಗಳು ತಪ್ಪಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಕ್ತಿತ್ವದ ಮೇಲೆ ತಪ್ಪಾದ ರೀತಿಯಲ್ಲಿ ಇನ್ನೂ ಹೆಚ್ಚಿನ ಆಕ್ರಮಣ ಮಾಡಬಹುದಾಗಿದೆ. ತಪ್ಪು ಪ್ರತಿಕ್ರಿಯೆಯ ಪರಿಣಾಮವಾಗಿ ಇಲ್ಲಿನ ಮುಸ್ಲಿಮರು ಅವರಿಗೆ ಸರಿಯಾದ ಸಲಹೆ ನೀಡುವವರು ಇಲ್ಲದ ಕಾರಣ ಅವರು ಸಹ ಪುನಃ ಪ್ರತಿಕ್ರಿಯೆ ನೀಡುವರು. ಈರೀತಿ ಗಲಭೆ ಗೊಂದಲಗಳ ಶೃಂಖಲೆ ಮುಂದುವರಿಯುವ ಅಪಾಯವಿದೆ. ಈಗ ಅಹ್ಮದಿಯಾ ಜಮಾಅತಿನ ಸದಸ್ಯರು ಈ ಎರಡು ವಿಭಾಗದ ಜನರನ್ನೂ ದೌರ್ಜನ್ಯದಿಂದ ಅಲ್ಲಾಹನು ರಕ್ಷಿಸಲಿ ಎಂದು ಪ್ರಾರ್ಥಿಸಬೇಕಾಗಿದೆ. ಅದೇ ರೀತಿ ಈ ದಿನಗಳಲ್ಲಿ ದುರೂದ್ ಶರೀಫ್ ಬಹಳ ಹೆಚ್ಚು ಹೆಚ್ಚಾಗಿ ಹೇಳಲು ಶ್ರದ್ಧೆ ನೀಡಿರಿ. ನಿಮ್ಮ ಸುತ್ತುಮುತ್ತಲೂ ಶಾಂತಿಯ ವಾತಾವರಣ ಸೃಷ್ಟಿಸಲು ಪ್ರಯತ್ನಮಾಡಿರಿ. ಅಲ್ಲಾಹನು ಲೋಕವನ್ನು ಗಲಬೆಗೊಂದಲಗಳಿಂದ ರಕ್ಷಿಸಲಿ. ಈಗಿರುವ ಅಶಾಂತಿಯ ಪರಿಸ್ಥಿತಿ ಬದಲಾಗಿ ಬೇಗನೆ ಶಾಂತಿಯ ಪರಿಸ್ಥಿತಿ ಸ್ಥಾಪಿತವಾಗಲಿ- ಆಮೀನ್.

---------------*****---------------


*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 09-01-2015.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*